# ಪ್ರೀತಿಯ ಹೂವು

ಪ್ರೀತಿ ಅರಳಲು ಕಾರಣ ಬೇಕಿಲ್ಲ
ಯಾಕೆ ಕೇಳುತ್ತಾರೆಲ್ಲ ಮತ್ತೆ ಮತ್ತೆ
ಅದೇ ಹಳಸಲು ಪ್ರಶ್ನೆಯ

ಯಾರಿಗಾದರೂ ಗೊತ್ತಿದೆಯೇನು
ಹೂವು ಅರಳುವುದು ಏಕೆಂದು?
ಹಕ್ಕಿ ಹಾಡ ನಿಲ್ಲಿಸುವುದು ಎಂದು?



# ನೆನೆದ ಬಟ್ಟೆಯಾಗಿದೆ ಮನಸ್ಸು

ನೀನೊಲಿದೇ ಒಲಿಯಬೇಕೆಂಬ ಹಟವೇನೂ ನನಗಿಲ್ಲ
ಹೇಳಿ ಮಾಡಿಸಿಕೊಂಡ ಸರಸದಲ್ಲಿ
ಒಂದಿನಿತೂ ಸುಖವಿಲ್ಲ
ಪ್ರೀತಿಸುವಾ ಕಲೆಯನ್ನು
ಕಲಿಸಲಿಕ್ಕೆ ಬರುವುದಿಲ್ಲ.

ಒಲಿದರೆ ಮತ್ತೆ ಮುರಿಯಬಾರದು
ಅರಳಿದರೆ ಮತ್ತೆ ಮುದುಡಬಾರದು
ಹಸಿ ಮಣ್ಣಾಗಿದೆ ನನ್ನ ಮೈ
ನೆನೆದ ಬಟ್ಟೆಯಾಗಿದೆ ಮನಸ್ಸು
ದಯಮಾಡಿ ಹಿಂಡಬೇಡ.